ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಂಖ್ಯೆ ಮತ್ತು ಹೆಸರು: ವಾರ್ಡ್-94, ಗಾಂಧಿನಗರ

ದಿನಾಂಕ:-07.11.2020 ರಂದು ವಾರ್ಡಿನ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ನಡೆದ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಶ್ರೀಮತಿ.ಗೀತಾ, ನೋಡೆಲ್ ಅಧಿಕಾರಿ ವಾರ್ಡ್-94
2. ಶ್ರೀ.ಪೃಥ್ವಿರಾಜ್.ಜಿ.ಎನ್, ಸಿವಿಲ್ ಇಂಜಿನೀಯರ್ ವಾರ್ಡ್-94 (ಗುತ್ತಿಗೆ ಆಧಾರದ ಮೇಲೆ)
3. ಶ್ರೀ.ಗೋವಿಂದರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-94
4. ಶ್ರೀ.ಶ್ರೀನಿವಾಸ್, ಕಂದಾಯ ಪರಿವೀಕ್ಷಕರು, ವಾರ್ಡ್-95
5. ಶ್ರೀಮತಿ.ಶಾಹಿನ್ ಜಾವಿದ್, ವೈದ್ಯಾಧಿಕಾರಿ, ವಾರ್ಡ್-94
6. ಲಿಂಕ್ ವರ್ಕರ್ಸ್

ದಿ:07.11.2020 ರಂದು ಗಾಂಧಿನಗರ ಉಪವಿಬಾಗ ವಾರ್ಡ್-94ರ ವಾರ್ಡ್ ಕಚೇರಿಯಲ್ಲಿ ಶ್ರೀಮತಿ.ಗೀತಾ ರವರು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್-94 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತ್ತು.

➢ ಕಾಮಗಾರಿ ಇಲಾಖೆಗೆ ಸಂಬಂಧಿಸಿರುವುದು

1. ರಸ್ತೆಗಳನ್ನು ಕತ್ತರಿಸಿ ಹಾಳು ಮಾಡುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
2. ಕೆ.ಜಿ.ರೋಡ್ ಸಾರ್ವಜನಿಕರ ಪಾದಚಾರಿ ರಸ್ತೆಗಳಲ್ಲಿ ಅನಧಿಕೃತವಾಗಿ ಇಟ್ಟಿರುವ
3. ವಾರ್ಡ್-94ರ ಬೀದಿ ದೀಪಗಳು ದುರಸ್ಥಿಯಲ್ಲಿದ್ದು ಕೂಡಲೇ ಅವುಗಳನ್ನು ಸರಿಪಡಿಸಿ ಕ್ರಮ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು.
4. ವಾರ್ಡ್-94ರ ರಸ್ತೆ ಬದಿಯ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಹಾಗೂ ಮೋರಿಗಳಲ್ಲಿ ತುಂಬಿರುವ ಮಣ್ಣು ಹಾಗೂ ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.
5. ವಾರ್ಡ್-94ರ ವ್ಯಾಪ್ತಿಯಲ್ಲಿನ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಈ ಕೂಡಲೇ ಸರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿರುತ್ತಾರೆ.
6. ವಾರ್ಡ್-94ರ ವ್ಯಾಪ್ತಿಯಲ್ಲಿನ ಪ್ರಗತಿಯಲ್ಲಿರುವ ಕಾಮಗಾರಿಗಳ ವರದಿಯೊಂದಿಗೆ ಸ.ಕಾ.ನಿ.ಅಭಿಯಂತರರಿಗೆ ಮುಂದಿನ ಸಭೆಯಲ್ಲಿ ಹಾಜರಾಗಲು ಸೂಚಿಸಲಾಯಿತು.
7. ಸಾಮಾಗ್ರಿಗಳನ್ನು ತೆರವುಗೊಳಿಸಲು ವಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಚರ್ಚಿಸಿ ಕೂಡಲೇ ತೆರವುಗೊಳಿಸಲು ತಿಳಿಸಲಾಯಿತು.
8. ವಾರ್ಡ್-94 ರ ಪ್ರಗತಿಯಲ್ಲಿರುವ ಕಾಮಗಾರಿಗೆ ಸಂಬಂಧಿಸಿದ ಗುತ್ತಿಗೆದಾರರನ್ನು ಮುಂದಿನ ಸಭೆಗಳಲ್ಲಿ ಸೂಕ್ತ ದಾಖಲೆಗಳೊಂದಿಗೆ ಹಾಜರಾಗಲು ಸೂಚಿಸಲಾಯಿತು .

Scanned by CamScanner

➢ ಆರೋಗ್ಯ ಇಲಾಖೆಗೆ ಸಂಬಂಧಿಸಿರುವುದು

1. ವಾರ್ಡ್-94ರ ಒಣತ್ಯಾಜ್ಯ ಸಂಗ್ರಹಣೆ ಘಟಕದಿಂದ ತ್ಯಾಜ್ಯ ಸಾಗರಣೆ ಮಾಡಿರುವ ವಿವರ, ತ್ಯಾಜ್ಯ ವಿಲೇವಾರಿಗೆ ವಾರ್ಡ್‌ನಲ್ಲಿ ಎಷ್ಟು ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಜರಾತಿಯೊಂದಿಗೆ ಮತ್ತು ಆಟೋ ಟಿಪ್ಪರ್ (ಕಾಂಪ್ಯಾಕ್ಟರ್) / ಲಾರಿ ಹಾಗೂ ಎಲ್ಲಾ ಸಲಕರಣೆಗಳ ವಿವರದೊಂದಿಗೆ ಮುಂದಿನ ಸಭೆಯಲ್ಲಿ ಹಾಜರಾಗಲು ತಿಳಿಸಿದೆ.
2. ವಾರ್ಡ್-94ರ ವ್ಯಾಪ್ತಿಯಲ್ಲಿನ Standby ಆಟೋ ಟಿಪ್ಪರ್‌ಗಳನ್ನು ಪೂರ್ಣ ಪ್ರಮಾಣದ ವ್ಯವಸ್ಥೆ ಮಾಡುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವ ಕುರಿತು ಬಗ್ಗೆ ಸೂಚಿಸಲಾಯಿತು.

➢ ಪ್ರಾಥಮಿಕ ಆರೋಗ್ಯ ಕೇಂದ್ರ

1. ವಾರ್ಡ್-94ರ ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಕೋವಿಡ್-19 ರಲ್ಲಿ ದಾಖಲಾಗಿರುವ ವಿವರ ಹಾಗೂ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಿದೆ.
2. ವಾರ್ಡ್-94ರ ವ್ಯಾಪ್ತಿಯಲ್ಲಿನ ಕೋವಿಡ್-19 ಒಟ್ಟು ಸೋಂಕಿತ ರೋಗಿಗಳ ಸಂಖ್ಯೆ ಎಷ್ಟು, ಸಕ್ರಿಯ (Active) ರೋಗಿಗಳು ಎಷ್ಟು, ಹೊಮ್ ಕ್ವಾರೆಂಟಿನ್‌ನಲ್ಲಿರುವ ರೋಗಿಗಳ ವಿವರವಾದ ವರದಿಯನ್ನು ನೀಡಲು ಸೂಚಿಸಿದೆ.

➢ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿದರುವ (BWSSB)

ವಾರ್ಡ್-94ರ ಗಾಂಧಿನಗರ ವ್ಯಾಪ್ತಿಯಲ್ಲಿನ ರಸ್ತೆ ಅಗೆದಿರುವುದು ಕಂಡುಬಂದಿದ್ದು ಸಾರ್ವಜನಿಕರಿಂದ ದೂರುಗಳು ಬಂದಿರುತ್ತದೆ, ಅದರ ವಿವರವನ್ನು ಮುಂದಿನ ಸಭೆಯಲ್ಲಿ ನೀಡಲು ಹಾಜರಿದ್ದ ಅಧಿಕಾರಿಗೆ ಸೂಚಿಸಲಾಯಿತು.

2. ವಾರ್ಡ್-94ರ ಗಾಂಧಿನಗರ ವ್ಯಾಪ್ತಿಯಲ್ಲಿನ ಎಲ್ಲಾ ಬಡವಾಣೆಗಳ ನೀರು ಸರಬರಾಜು ಸಮಯದ ವಿವರವನ್ನು ಮುಂದಿನ ಸಭೆಯಲ್ಲಿ ನೀಡಲು ಹಾಜರಿದ್ದ ಅಧಿಕಾರಿಗೆ ಸೂಚಿಸಲಾಯಿತು.

➢ ಕಂದಾಯ ಇಲಾಖೆಗೆ ಸಂಬಂಧಿಸಿದರುವ

1. ವಾರ್ಡ್-94ರ ವ್ಯಾಪ್ತಿಯಲ್ಲಿನ ಕಂದಾಯ ವಸೂಲಾತಿ ಬಗ್ಗೆ ಬೇಡಿಕೆ ಹಾಗೂ ಪಾವತಿ ಹಾಗೂ ಬಾಕಿ ಇರುವ ವಿವರಗಳೊಂದಿಗೆ ಕಂದಾಯ ಪರಿವೀಕ್ಷಕರು / ಕಂದಾಯ ವಸೂಲಿಗಾರರು ಹಾಜರಾಗಲು ಸೂಚಿಸಿದೆ.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸುತ್ತಾ, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸಿವಿಲ್ ಇಂಜಿನೀಯರ್ಸ್ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿರುತ್ತಾರೆ.

N. Geetha
ನೋಡೆಲ್ ಅಧಿಕಾರಿ
ವಾರ್ಡ್-94

Scanned by CamScanner